# ಗಾಂಧಿನಗರ ಪೋಸ್ಟ್

■ ರಘು

## ಸಿಂಹಾವಲೋಕನ



**ವಿ**ಷ್ಣುವರ್ಧನ್ ಹುಟ್ಟುಹಬ್ಬ ಈ ಸಲ ಸಿನಿಮಾ ಹಬ್ಬ. ಸೆಪ್ಟೆಂಬರ್ 18ರಿಂದ ಮೂರು ದಿನಗಳ ಕಾಲ ವಿಷ್ಣು ಚಿತ್ರಗಳ ಚಿತ್ರೋತ್ಸವ ಬೆಂಗಳೂರಿನ ಗರುಡ ಮಾಲ್ ಐನಾಕ್ಸ್ ಚಿತ್ರಮಂದಿರದಲ್ಲಿ ನಡೆಯಲಿದೆ. ವಿಷ್ಣು ಅಭಿನಯದ ಹನ್ನೆರಡು ಚಿತ್ರಗಳು ಮೂರು ದಿನಗಳ ಕಾಲ ಅಭಿಮಾನಿಗಳಿಗಾಗಿ ಪ್ರದರ್ಶನಗೊಳ್ಳಲಿವೆ.

ವಿಷ್ಣು ಹುಟ್ಟುಹಬ್ಬದ ಹಿನ್ನೆಲೆಯಲ್ಲಿನ ಸಿದ್ಧತೆಯ ವಿವರಗಳನ್ನು ತಿಳಿಸಲು ಭಾರತಿ ವಿಷ್ಣುವರ್ಧನ್ ತಮ್ಮ ಮನೆಯಲ್ಲಿಯೇ ಸುದ್ದಿಗೋಷ್ಠಿ ಕರೆದಿದ್ದರು. ವಿಷ್ಣು ಹೆಸರಿನಲ್ಲಿ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಮೂಲಕ ಸಂಗಾತಿಯ ಹೆಸರು–ನೆನಪನ್ನು ಹಸಿರಾಗಿರಿಸುವುದು ಭಾರತಿ ಅವರ ಉದ್ದೇಶ. ಈ ನಿಟ್ಟಿನಲ್ಲಿ 'ವಿಭಾ' (ವಿಷ್ಣುವರ್ಧನ್–ಭಾರತಿ) ಟ್ರಸ್ಟ್ ರೂಪುಗೊಂಡಿದೆ. ಆರೋಗ್ಯ ತಪಾಸಣೆ, ವೈದ್ಯಕೀಯ ಚಿಕಿತ್ಸೆ, ಶಿಕ್ಷಣಕ್ಕೆ ನೆರವು– ಮುಂತಾದ ಚಟುವಟಿಕೆಗಳಲ್ಲಿ 'ವಿಭಾ' ತೊಡಗಿಸಿಕೊಳ್ಳಲಿದೆ. ಅಭಿಮಾನ್ ಸ್ಟುಡಿಯೋದಲ್ಲಿ ನಿರ್ಮಾಣವಾಗುತ್ತಿರುವ ವಿಷ್ಣು ಸ್ಮಾರಕದಲ್ಲಿ ಗ್ಯಾಲರಿ– ಆಡಿಟೋರಿಯಂ ನಿರ್ಮಿಸುವ ಯೋಜನೆಯಿದೆ. ಸ್ಮಾರಕ ನಿರ್ಮಾಣಕ್ಕೆ ಸಂಬಂಧಿಸಿದಂತೆ ಸರ್ಕಾರ ಸಕಾರಾತ್ಮಕವಾಗಿ ಸ್ಪಂದಿಸುತ್ತಿದೆಯಂತೆ.



## ಗುಬ್ಬಿಗೂಡಲ್ಲಿ ವಿಜಿ

**ಆ**ಸ್ಪತ್ರೆಗೆ ಹೋಗಿ ರಕ್ತದಾನ ಮಾಡಿದ್ದು ಒಮ್ಮೆ ಮಾತ್ರ. ಆದರೆ, ಅಭಿನಯಿಸಿದ ಪ್ರತಿ ಚಿತ್ರದಲ್ಲೂ ರಕ್ತ ಚೆಲ್ಲಿದ್ದೇನೆ!

–ನಟ ವಿಜಯ್ ಮಾತುಗಳೇ ಹೀಗೆ. ಕಡ್ಡಿ ಮುರಿದಂತೆ. 'ಕರಿ ಚಿರತೆ' ತೆರೆ ಕಂಡಿರುವ ಸಂದರ್ಭದಲ್ಲಿ ಸುದ್ದಿಗಾರರೊಂದಿಗೆ ಹರಟಿದ ವಿಜಯ್ ಮಾತುಗಳು ಬದುಕಿನ ಕುರಿತ ಅವರ ಧೋರಣೆಯನ್ನು ವ್ಯಕ್ತ ಪಡಿಸುವಂತಿದ್ದವು. ಪ್ರತಿ ಸಿನಿಮಾ ಸಂದರ್ಭದಲ್ಲೂ ಜೀವವನ್ನು ಪಣಕ್ಕಿಟ್ಟು ಸಾಹಸ ದೃಶ್ಯಗಳಲ್ಲಿ ತೊಡಗಿಕೊಳ್ಳುವುದು, ಮಕ್ಕಳ ಕುರಿತ ಪ್ರೀತಿ, ಗಾಸಿಪ್‌ಗಳ ಹಾವಳಿ, ಮಾಧ್ಯಮಗಳೊಂದಿಗಿನ ತಮ್ಮ ಅಸಹನೆ ಹಾಗೂ ಪ್ರೀತಿ– ಎಲ್ಲವೂ ವಿಜಯ್ ಮಾತುಗಳಲ್ಲಿ ಬಂತು. ಇನ್ನು ಮುಂದೆ ಜಗಳವಾಡುವುದನ್ನು ಕಡಿಮೆ ಮಾಡುತ್ತೇನೆ, ವೃಥಾ ದ್ವೇಷ ಸಾಧಿಸುವುದರಲ್ಲಿ ಅರ್ಥವಿಲ್ಲ ಎಂದು ಸಿನಿ ವೈರಾಗ್ಯ ವ್ಯಕ್ತಪಡಿಸಿದರು.

ಮಾತು ಸಿನಿಮಾ ವಿಷಯಕ್ಕೆ ಬಂತು. ವಿಜಯ್ ಅಭಿನಯದ 'ವೀರಬಾಹು' ಮತ್ತು 'ಕಂಠೀರವ' ಚಿತ್ರಗಳ ಟಾಕಿ ಪೋರ್ಷನ್ ಮುಗಿದಿದ್ದು, ಹಾಡುಗಳಷ್ಟೇ ಬಾಕಿಯಿವೆಯಂತೆ. ಈ ನಡುವೆ ಪ್ರೀತಂ ಗುಬ್ಬಿ ನಿರ್ದೇಶಿಸುವ 'ಜಾನಿ ಮೇರೆ ನಾಮ್, ಪ್ರೀತಿ ಮೇರಾ ಕಾಮ್' ಎನ್ನುವ ಹೆಸರಿನ ಚಿತ್ರವನ್ನು ಒಪ್ಪಿಕೊಂಡಿದ್ದಾರೆ. ಚಿತ್ರಕಥೆ ಇನ್ನೂ ಮುಗಿದಿಲ್ಲ. ಚಿತ್ರದ ಶೀರ್ಷಿಕೆಯಿಂದಲೇ ಆಕರ್ಷಿತರಾಗಿರುವ ವಿಜಯ್, ಕಥೆಯನ್ನು ಕೇಳದೆಯೇ ಗುಬ್ಬಿ ಸಿನಿಮಾದಲ್ಲಿ ನಟಿಸಲು ಹೂಂ ಅಂದಿದ್ದಾರೆ.

## ಪ್ರೇಕ್ಷಕನ ಸುಳಿವು!



**ಕೊ**ನೆಗೂ ಪ್ರೇಕ್ಷಕ ಪ್ರಭುವಿನ ಸುಳಿವು ದೊರೆತಿದೆ! ಗಿರೀಶ್ ಕಾಸರವಳ್ಳಿ, ಬಳಗದ ಮೊಗದಲ್ಲಿ ಕಿರುನಗೆ. 'ಚಿತ್ರವರ್ಷ'ದ ಹೆಸರಿನಲ್ಲಿ ಇಡೀ ವರ್ಷ ಭಿನ್ನಜಾಡಿನ ಕನ್ನಡ ಚಿತ್ರಗಳನ್ನು ಪ್ರೇಕ್ಷಕರ ಮುಂದಿಡುವ 'ಚಿತ್ರಸಮೂಹ'ದ ಆರಂಭಿಕ ನಡೆಗೆ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ. ಬೆಂಗಳೂರಿನ ಸುಚಿತ್ರಾ ಫಿಲಂ ಸೊಸೈಟಿ ಥಿಯೇಟರ್‌ನಲ್ಲಿ ಕಳೆದ ಮೂರು ತಿಂಗಳಿಂದ ವಾರಾಂತ್ಯಗಳಲ್ಲಿ ಈ ಪ್ರದರ್ಶನ ನಡೆಯುತ್ತಿದೆ.

ಮೊದಲ ತ್ರೈಮಾಸಿಕದ ಯಶಸ್ಸಿನ ಹಿನ್ನೆಲೆಯಲ್ಲಿ ಚಿತ್ರಸಮೂಹ ಬಳಗ ಸಂತೋಷಕೂಟ ಹಮ್ಮಿಕೊಂಡಿತ್ತು. ನಿರ್ದೇಶಕರಾದ ಗಿರೀಶ್ ಕಾಸರವಳ್ಳಿ, ಪಿ.ಶೇಷಾದ್ರಿ, ರಾಮದಾಸ ನಾಯ್ಡು, ಕವಿತಾ ಲಂಕೇಶ್, ವಿಮರ್ಶಕ ಮನು ಚಕ್ರವರ್ತಿ ಸೇರಿದಂತೆ ಸಮೂಹದ ಅನೇಕರು ಹಾಜರಿದ್ದರು. ಅಂದ ಹಾಗೆ, ಈ 'ಚಿತ್ರವರ್ಷ'ದಿಂದ ನಿರ್ಮಾಪಕನಿಗೆ ಲಾಭವಾಗುವುದಾ? ಸದ್ಯಕ್ಕಂತೂ ಈ ಪ್ರಯತ್ನದಲ್ಲಿ ದೊರೆಯುತ್ತಿರುವ ಆರ್ಥಿಕ ಲಾಭ ತುಂಬಾ ಸಣ್ಣದು. ಸಹೃದಯಿ ಪ್ರೇಕ್ಷಕರನ್ನು ರೂಪಿಸುವುದೇ 'ಚಿತ್ರವರ್ಷ'ದ ಮುಖ್ಯ ಧ್ಯೇಯ. ಒಳ್ಳೆಯ ಪ್ರೇಕ್ಷಕವರ್ಗ ರೂಪುಗೊಳ್ಳುವುದೆಂದರೆ ನಿರ್ಮಾಪಕ ಉಳಿಯುವುದು ಎಂದರ್ಥ! ಅಲ್ಲವೇ?